ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ: 14ನೇ ಡಿಸೆಂಬರ್, 2020

ವಸತಿ ಶಾಲೆಗಳಿಗೆ ಪ್ರಾಂಶುಪಾಲರ ನೇಮಕಾತಿ ಕುರಿತು

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-

557(619) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಮಾಜ ಕಲ್ಯಾಣ ಇಲಾಖೆಯ ಕ್ರೈಸ್ ಸಂಸ್ಥೆಯ ಅಧೀನದ ವಸತಿ ಶಾಲೆಗಳಲ್ಲಿ ಖಾಲಿಯಿರುವ ಪ್ರಾಂಶುಪಾಲರ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಸದರಿ ಖಾಲಿಯಿರುವ ಪ್ರಾಂಶುಪಾಲರ ಹುದ್ದೆಗಳಲ್ಲಿ ವಸತಿ ಶಾಲಾ ಶಿಕ್ಷಕರುಗಳಿಗೆ ಯಾವ ನಿಯಮಗಳಡಿಯಲ್ಲಿ ಪ್ರಭಾರದಲ್ಲಿರಿಸಲಾಗಿದೆ ; (ಮಾಹಿತಿ ಒದಗಿಸುವುದು)

(ಇ) ಪ್ರಭಾರದಲ್ಲಿರಿಸಿದ ಸಿಬ್ಬಂದಿಗಳಿಗೆ ಇದುವರೆಗೆ ಮಂಜೂರಿಸಿದ ಪ್ರಭಾರ ಭತ್ಯೆಯ ವಿವರವನ್ನು ನೀಡುವುದು ;

(ಈ) ಇಲ್ಲವಾದಲ್ಲಿ, ಪ್ರಭಾರ ಭತ್ಯೆಯನ್ನು ನೀಡದಿರಲು ಕಾರಣಗಳೇನು;

(ಉ) ಸದರಿ ವಸತಿ ಶಾಲೆಗಳಿಗೆ ಪೂರ್ಣಕಾಲಿಕ ಪ್ರಾಂಶುಪಾಲರ ಅವಶ್ಯಕತೆಯಿಲ್ಲವೇ; ಅವಶ್ಯಕತೆಯಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು ?